**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ**
**ಕಾರ್ಯನಿರ್ವಾಹಕ ಕಛೇರಿ, ನೆಲಮಹಡಿ, ಬಿ.ಎಂ.ಟಿ.ಸಿ, ಯಶವಂತಪುರ, ಟಿ.ಟಿ.ಎಂ.ಸಿ ಬಸ್ ನಿಲ್ದಾಣ, ಯಶವಂತಪುರ ವೃತ್ತ, ಬೆಂಗಳೂರು–560 022.**
**ದೂರವಾಣಿ: 080–43344334 ಫ್ಯಾಕ್ಸ್: (080) 43344376, ವೆಬ್‌ಸೈಟ್: www.kstdc.co**

# ಟಿಪ್ಪಣಿ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಪ್ರವಾಸೋದ್ಯಮ ಇಲಾಖೆಯ ಅಂಗ ಸಂಸ್ಥೆಯಾಗಿದ್ದು, ರಾಜ್ಯಕ್ಕೆ ಭೇಟಿ ನೀಡುವ ದೇಶಿಯ ಹಾಗೂ ವಿದೇಶಿಯ ಪ್ರವಾಸಿಗರಿಗೆ ಉತ್ತಮ ಗುಣಮಟ್ಟದ ವಸತಿ, ಸಾರಿಗೆ ಹಾಗೂ ಪ್ರವಾಸ ಪ್ಯಾಕೇಜುಗಳನ್ನು ಒದಗಿಸುತ್ತಿರುತ್ತದೆ.

ಮುಂದುವರೆದು, ನಿಗಮವು ರಾಜ್ಯದ ವಿವಿಧ ಪ್ರವಾಸಿ ತಾಣಗಳಲ್ಲಿ ಒಟ್ಟು 24 ಹೋಟೆಲ್ ಘಟಕಗಳನ್ನು ಹೊಂದಿರುತ್ತದೆ. ಈ ಸಂಬಂಧ, ಆತಿಥ್ಯ ಕ್ಷೇತ್ರವನ್ನು ಉತ್ತೇಜಿಸುವ ಸಲುವಾಗಿ ಹಾಗೂ ಯುವ ಜನತೆಗೆ ಉತ್ತಮ ಅವಕಾಶ ಕಲ್ಪಿಸುವ ಸಲುವಾಗಿ, ಆರು ತಿಂಗಳ ಅವಧಿಗೆ ಇಂಟರ್ನ್ ಶಿಪ್ ಒದಗಿಸಲು ತೀರ್ಮಾನಿಸಲಾಗಿರುತ್ತದೆ.

ಆದ್ದರಿಂದ, ಪ್ರವಾಸೋದ್ಯಮ ಹಾಗೂ ಆತಿಥ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಕೋರ್ಸ್ ಗಳಲ್ಲಿ (BHM, MHM, B.Sc in Hotel Management, MBA in Hotel Management, BHMCT, Diploma In Hotel and Hospitality Management and other Hotel Management Course) ಅಂತಿಮ ವರ್ಷದಲ್ಲಿರುವ ಹಾಗೂ ಈಗಾಗಲೇ ತೇರ್ಗಡೆ ಹೊಂದಿರುವ ಆಸಕ್ತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆಯ್ಕೆಗೊಳ್ಳುವ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿಯೊಂದಿಗೆ ರೂ. 3,000/-ಗಳ Stipend ನೀಡಲಾಗುವುದು.

**ಅರ್ಜಿ ಸಲ್ಲಿಸಲು ಸೂಚನೆಗಳು :**

1. ಪದವಿ ಅಥವಾ ಉನ್ನತ ಪದವಿಯಲ್ಲಿ ತೇರ್ಗಡೆ ಹೊಂದಿರಬೇಕು (ಗರಿಷ್ಠ 06 ತಿಂಗಳ ಅವಧಿಯೊಳಗೆ) ಅಥವಾ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರಬೇಕು.
2. ವಯೋಮಿತಿ- 18 ರಿಂದ 25 ವಯಸ್ಸಿನವರಾಗಿರಬೇಕು
3. ಆಸಕ್ತ ವಿದ್ಯಾರ್ಥಿಗಳು Resume ನೊಂದಿಗೆ ತಮ್ಮ ವೈಯಕ್ತಿಕ ವಿವರ ಹಾಗೂ ವಿದ್ಯಾರ್ಹತೆಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.
4. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಯಾವುದೇ ವಿಷಯಗಳನ್ನು ಬಾಕಿ ಉಳಿಸಿಕೊಂಡಿರಬಾರದು ಅಥವಾ ಅನುತ್ತೀರ್ಣರಾಗಿರಬಾರದು.
5. ದಾಖಲಾತಿಗಳನ್ನು ಲಗತ್ತಿಸದಿರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
6. ಅರ್ಜಿಗಳನ್ನು ನಿಗಮದ ಇಮೇಲ್ internship@karnatakaholidays.net ಅಥವಾ ಸೀಲ್ಡ್ ಕವರ್ ನಲ್ಲಿ ನೇರವಾಗಿ/ಅಂಚೆ ಮುಖಾಂತರ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು.
7. ಅಥವಾ ಕಾಲೇಜು ವತಿಯಿಂದಲೇ ಆಸಕ್ತ ವಿದ್ಯಾರ್ಥಿಗಳ ವಿವರಗಳನ್ನು ಕ್ರೋಢೀಕರಿಸಿ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು.

**ವ್ಯವಸ್ಥಾಪಕರು (ಆಡಳಿತ)**
**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ,**
**ಕಾರ್ಯ ನಿರ್ವಾಹಕ ಕಛೇರಿ, ನೆಲಮಹಡಿ,**
**ಬಿ.ಎಂ.ಟಿ.ಸಿ. ಯಶವಂತಪುರ,**
**ಟಿ.ಟಿ.ಎಂ.ಸಿ. ಬಸ್ ನಿಲ್ದಾಣ,**
**ಯಶವಂತಪುರ ವೃತ್ತ, ಬೆಂಗಳೂರು-560 022**